ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಶುಕ್ರವಾರ, ದಿನಾಂಕ : 05 ನೇ ಫೆಬ್ರುವರಿ, 2021

ಗೋ ಹತ್ಯೆ ನಿಷೇಧ ಕಾಯ್ದೆ ಕುರಿತು ಇರುವ ಗೊಂದಲದ ಬಗ್ಗೆ

ಶ್ರೀ ಸಿ. ಎಂ. ಇಬ್ರಾಹಿಂ(ವಿಧಾನ ಸಭೆಯಿಂದ ಚುನಾಯಿತರಾದವರು) -

76 (518) ಪಶುಸಂಗೋಪನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದಲ್ಲಿ ಸದ್ಯ ಒಟ್ಟು ಎಷ್ಟು ಗೋಶಾಲೆಗಳು ಚಾಲ್ತಿಯಲ್ಲಿವೆ; ಅದರಲ್ಲಿ ಸರ್ಕಾರಿ, ಖಾಸಗಿ/ಸ್ವಯಂ ಸೇವಾ ಸಂಘ ಇತ್ಯಾದಿ ನಡೆಸಿಕೊಂಡು ಬರುತ್ತಿರುವ ಗೋಶಾಲೆಗಳ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ/ಹೋಬಳಿ ಮಟ್ಟಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು;

(ಆ) ರಾಜ್ಯ ಸರ್ಕಾರದ ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಯಿಂದ ರೈತ ಭಾಂದವರಿಗೆ ಮತ್ತು ವೃತ್ತಿ ನಿರತ ಹಾಗೂ ಖಾದ್ಯ ಸೇವನೆ ಮಾಡುವವರಿಗೆ ಆಗುವ ಗಂಭೀರ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪರಿಹಾರಕ್ಕೆ ತೆಗೆದುಕೊಂಡ ಕ್ರಮಗಳೇನು;

(ಇ) ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಯಿಂದ ವಯಸ್ಸಾದ ಮತ್ತು ಹೊಲದಲ್ಲಿ ಉಳುವೆ ಮಾಡಲು ಸಾಧ್ಯವಾಗದೇ ಸಾಕಲು ಹೊರೆ ಅನ್ನಿಸುವಂತಹ ಗೋವುಗಳನ್ನು ಸರ್ಕಾರ ಖರೀದಿ ಮಾಡುತ್ತದೆಯೇ: ಮಾಡುವುದಾದಲ್ಲಿ, ಅವುಗಳ ಪಾಲನೆ/ನಿರ್ವಹಣೆಗೆ ರಾಜ್ಯ ಸರ್ಕಾರದ ಕಾರ್ಯ ಯೋಜನೆಗಳೇನು;

(ಈ) ರಾಜ್ಯದಲ್ಲಿ ಒಟ್ಟು ಎಷ್ಟು ಪಶುಪಾಲನಾ ಆಸ್ಪತ್ರೆಗಳಿವೆ; ಅದರಲ್ಲಿ ಮಂಜೂರಾಗಿರುವ ಪಶು ವೈದ್ಯರ ಹುದ್ದೆಗಳೆಷ್ಟು; ಸದ್ಯ ಎಷ್ಟು ಪಶು ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ? (ಸಂಪೂರ್ಣ ಮಾಹಿತಿ ಒದಗಿಸುವುದು)